Constitution of a Corporation for Shimoga-Bhadravathi

819. Sri K. H. SRINIVASA (Sagar).—

Will the Minister of State for Municipal Administration be pleased to state :—

(*a*) whether there is any proposal before Government to constitute a Corporation for Shimoga-Bhadravathi, similar to the one constituted for Hubli-Dharwar ;

(*b*) if so, where the matter stands at present ?

Sri B. M. PATIL (Minister of State for Municipal Administration).—

(*a*) No.

(*b*) Does not arise.

ಶ್ರೀ ಕೆ. ಹೆಚ್. ಶ್ರೀನಿವಾಸ.—ಕಾರ್ಪೊರೇಷನ್ ಮಾಡಲಿಕ್ಕೆ ಯಾರಿಂದ ಸಲಹೆಗಳು ಬರಬೇಕೆಂದು ಸರಕಾರ ನಿರೀಕ್ಷಿಸುತ್ತಿದೆ ? ಇದನ್ನು ಸರಕಾರದವರೇ ನೇರವಾಗಿ ಪರಿಶೀಲಿಸಿ ಕಾರ್ಪೊರೇಷನ್ ಮಾಡಲು ಇರುವ ಬಾಧಕಗಳೇನು ?

† ಶ್ರೀ ಬಿ. ಎಂ. ಪಾಟೀಲ್.—ಸಾಧಾರಣವಾಗಿ ಇಂತಹ ಸೂಚನೆಗಳು ಅಥವಾ ಸಲಹೆಗಳು ಬರಬೇಕಾದರೆ ಸಂಬಂಧಪಟ್ಟ ಮುನಿಸಿಪಲ್ ಕೌನ್ಸಿಲ್‌ನವರು ಒಂದು ರೆಸಲ್ಯೂಷನ್ ಪಾಸುಮಾಡಿ ಸರಕಾರಕ್ಕೆ ಕಳುಹಿಸಿಕೊಡಬೇಕು. ಅದನ್ನು ಕಳುಹಿಸಿದ ನಂತರ ಅವಶ್ಯಕವಿದ್ದರೆ ಸರಕಾರ ಅದನ್ನು ಪರಿಶೀಲನಬಹುದು.

ಶ್ರೀ ಕೆ. ಹೆಚ್. ಶ್ರೀನಿವಾಸ.—ಕಾರ್ಪೊರೇಷನ್ ಮಾಡಬೇಕೆಂದು ಇದರಲ್ಲಿ ಸ್ಪಷ್ಟವಾದ ಸೂಚನೆಗಳೇ ಇರುವುದರಿಂದ ಸರಕಾರವೇ ಏಕೆ ಇದನ್ನು ಪರಿಶೀಲನೆ ಮಾಡಬಾರದು ?

ಶ್ರೀ ಬಿ. ಎಂ. ಪಾಟೀಲ್.—ಸಾಧಾರಣವಾಗಿ ಇಲ್ಲ. ಇಲ್ಲಿರುವ ಮುನಿಸಿಪಲ್ ಸದಸ್ಯರುಗಳು ಇದನ್ನು ಒಪ್ಪಬೇಕು ಮತ್ತು ಇದಕ್ಕೆ ತಕ್ಕ ರೆಸಲ್ಯೂಷನ್ ಮಾಡಿ ಅವಶ್ಯ ಇದೆ ಎಂದು ಸರಕಾರಕ್ಕೆ ಕಳುಹಿಸಿಕೊಡಬೇಕು. ಹಾಗೆ ಕಳುಹಿಸಿ ಕೊಟ್ಟರೆ ಸೂಕ್ತ ಸಮಯದಲ್ಲಿ ಇದನ್ನು ಪರಿಶೀಲಿಸಬೇಕಾಗುತ್ತದೆ.

ಶ್ರೀ ಎ. ಆರ್. ಬದರೀನಾರಾಯಣ್.—ಶಿವಮೊಗ್ಗ ಮತ್ತು ಭದ್ರಾವತಿ ಮಧ್ಯದಲ್ಲಿ ಕೇವಲ 4 ಮೈಲು ಇದೆ. ಇವೆರಡೂ ಇಂಡಸ್ಟ್ರಿಯಲ್ ಏರಿಯಾ ಆಗಿರುವುದರಿಂದ ಇಲ್ಲಿ ಕಾರ್ಪೊರೇಷನ್ ಮಾಡಲು ಸೂಕ್ತವಾಗಿದೆ ಎನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ಎಂ. ಪಾಟೀಲ್.—ಇಂಡಸ್ಟ್ರಿಯಲ್ ಏರಿಯಾ ಎನ್ನುವುದು ಮತ್ತು ಹೊಸ ಹೊಸ ಕೈಗಾರಿಕೆಗಳು ಬರುತ್ತಿವೆ ಎನ್ನುವುದು ಸರಕಾರದ ಗಮನಕ್ಕೆ ಬಂದಿದೆ. ಆದರೆ ಭದ್ರಾವತಿ ಹಾಗೂ ಶಿವಮೊಗ್ಗಗಳಲ್ಲರುವ ಆದಾಯವನ್ನು ನೋಡಿದರೆ ಇಲ್ಲಿ ಹೆಚ್ಚು ಆದ್ಯಾಯವಿಲ್ಲ ಎನ್ನುವುದು ಗೊತ್ತಾಗುತ್ತದೆ. ಭದ್ರಾವತಿಯಲ್ಲಿರುವ ವಾರ್ಷಿಕ ಆದಾಯ ಸುಮಾರು 5 ಲಕ್ಷ ಇದೆ, ಅದೇ ಶಿವಮೊಗ್ಗದಲ್ಲಿ ವಾರ್ಷಿಕ ಆದಾಯ 16 ಲಕ್ಷ ಇದೆ.

Sri B. P. GANGADHAR.—What are the pre-requisites that are necessary for the Government to form a Corporation ?

ಶ್ರೀ ಬಿ. ಎಂ. ಪಾಟೀಲ್.—ಇದಕ್ಕೆ ಪ್ರೀ ರಿಕ್ವಿಸಿಟ್ಸ್ ಎಂದರೆ, ಬೆಂಗಳೂರು ನಗರಕ್ಕೆ ಪ್ರತ್ಯೇಕವಾದ ಕಾಯಿದೆ ಇದೆ, ಹಾಗೆ ಹುಬ್ಬಳ್ಳಿ ಧಾರವಾಡಕ್ಕೂ ಇದೆ. ಇನ್ನೂ ಇಲ್ಲಿ ಏಕರೂಪವಾದ ಕಾರ್ಪೊರೇಷನ್ ಕಾನೂನು ಬಂದಿಲ್ಲ. ಏಕರೂಪವಾದ ಕಾನೂನು ಇಲ್ಲದೆ ಇದನ್ನು ಪರಿಶೀಲನೆಯಲು ಸಾಧ್ಯವಾಗುವುದಿಲ್ಲ.

ಶ್ರೀ ಎಂ. ನಾಗಪ್ಪ.—ಕಾರ್ಪೊರೇಷನ್ ಮಾಡಬೇಕಾದರೆ ಅವಕ್ಕೆ ಬೇಕಾದ ಅರ್ಹತೆಗಳೇನು ? ಶಿವಮೊಗ್ಗ ಹಾಗೂ ಭದ್ರಾವತಿ ಇವೆರಡೂ ಸೇರಿ ಇಲ್ಲಿ ಕಾರ್ಪೊರೇಷನ್ ಮಾಡಲು ಸರಕಾರ ಯೋಚಿಸುತ್ತದೆಯೇ ?

ಶ್ರೀ ಬಿ. ಎಂ. ಪಾಟೀಲ್.—ಈಗಾಗಲೇ ಮಾನ್ಯ ಸಭೆಯಲ್ಲಿ ಹೇಳಿದಂತೆ ಸರಕಾರ ಯೂನಿ ಫಾರಂ ಕಾರ್ಪೊರೇಷನ್ ಆಕ್ಟ್ ತರಬೇಕೆಂದು ಇದೆ. ಆದನ್ನು ತಂದರೆ ಸೂಕ್ತ ಸಮಯದಲ್ಲಿ ಯಾವ ಯಾವ ಕಡೆ ಕಾರ್ಪೊರೇಷನ್‌ಗಳು ಹಾಗೂ ಮುನಿಸಿಪಾಲಿಟಿಗಳನ್ನು ಮಾಡಬೇಕೆಂದು ಇದೆಯೋ ಅವನ್ನು ಯೋಚನೆ ಮಾಡಲಾಗುತ್ತದೆ.

ಶ್ರೀ ಕೆ. ಹೆಚ್. ತಮ್ಮಯ್ಯ.—ಭದ್ರಾವತಿಯಲ್ಲಿರುವ ಮುನಿಸಿಪಾಲಿಟಿ ಆದಾಯ ಕಡಿಮೆ ಎಂದರೆ ಇಲ್ಲಿ ಸ್ಯಾನಿಟರಿ ಬೋರ್ಡು ಬೇರೆ ಇದೆ. ಇದನ್ನೂ ಮುನಿಸಿಪಾಲಿಟಿಗೇ ಸೇರಿಸಿದರೆ ಆದಾಯ ಇನ್ನೂ ಜಾಸ್ತಿಯಾಗುತ್ತದೆ. ಆದುದರಿಂದ ಇದನ್ನು ಸೇರಿಸಿ ಇಲ್ಲಿ ಕಾರ್ಪೊರೇಷನ್ ಮಾಡಲು ಸರಕಾರ ಪರಿಶೀಲಿಸುತ್ತದೆಯೇ ?

ಶ್ರೀ ಬಿ. ಎಂ. ಪಾಟೀಲ್.—ಕಾರ್ಪೊರೇಷನ್ ಮಾಡಲಿಕ್ಕೆ ಅರ್ಹತೆ ಇಲ್ಲ ಎಂದು ನಾನು ಹೇಳಲಿಲ್ಲ. ಯೂನಿಫಾರಂ ಕಾರ್ಪೊರೇಷನ್ ಆಕ್ಟ್ ಬಂದ ಮೇಲೆ ಕೂಲಂಕಷವಾಗಿ ಪರಿಶೀಲಿಸಿ, ಎಲ್ಲೆಲ್ಲಿ ಕಾರ್ಪೊರೇಷನ್ ಮಾಡಬೇಕು ಎನ್ನುವುದನ್ನು ಸೂಕ್ತ ಸಮಯದಲ್ಲಿ ಪರಿಶೀಲನೆ ಮಾಡುತ್ತೇವೆ.

ಶ್ರೀ ಎಸ್. ಬಂಗಾರಪ್ಪ.—ಶಿವಮೊಗ್ಗ ಹಾಗೂ ಭದ್ರಾವತಿಗಳ ಮಧ್ಯದಲ್ಲಿ ಕೇವಲ ನಾಲ್ಕು ಮೈಲಿಗಳು ಮಾತ್ರ ಉಳಿದಿವೆ. ಏಕೆಂದರೆ ಇಂಡಸ್ಟ್ರಿಯಲ್ ಎಸ್ಟೇಟುಗಳು ಆಗಿವೆ. ಇದು ದೊಡ್ಡ ಇಂಡಸ್ಟ್ರಿ ಏರಿಯಾ ಆಗಿರುವುದರಿಂದ ಇಲ್ಲಿ ಕಾರ್ಪೊರೇಷನ್ ಮಾಡುವ ಬಗ್ಗೆ ಸರಕಾರ ಪರಿಶೀಲನೆ ಮಾಡುತ್ತಾರೆಯೇ ?

ಶ್ರೀ ಬಿ. ಎಂ. ಪಾಟೀಲ್.—ಮಾನ್ಯ ಸದಸ್ಯರಿಗೆ ಈಗಾಗಲೇ ಉತ್ತರ ಹೇಳಿದ್ದೇನೆ ; ಕೂಡಲೇ ಆದನ್ನು ಮಾಡುವುದಕ್ಕಾಗುವುದಿಲ್ಲ ಎಂದು. ಅದರೆ ಅರ್ಹತೆ ಇಲ್ಲವೆಂದು ಸರ್ಕಾರದ ಅಭಿಪ್ರಾಯ ಇಲ್ಲ. ಅಲ್ಲಿ ಉದ್ಯಮಗಳು ಬೆಳೆಯುತ್ತಾ ಇದೆ, ಅದನ್ನು ಕಾರ್ಪೊರೇಷನ್ ಆಗಿ ಮಾಡುವ ಅಭಿಪ್ರಾಯ ಸರ್ಕಾರಕ್ಕೆ ಇದೆ ಮತ್ತು ಮಾನ್ಯ ಸದಸ್ಯರ ಅಭಿಪ್ರಾಯವನ್ನೂ ಕೂಡ ಗಮನದಲ್ಲಿಟ್ಟು ಕೊಂಡು ಸೂಕ್ತ ಸಮಯ ಬಂದಾಗ ಪರಿಶೀಲನೆಗೆ ತೆಗೆದುಕೊಳ್ಳುತ್ತೇವೆ.

ಶ್ರೀ ಎ. ಆರ್. ಬದರೀನಾರಾಯಣ್.—ಕಾರ್ಪೊರೇಷನ್ ಆಗುವುದಕ್ಕೆ ಸಾಕಾದಷ್ಟು ಲಕ್ಷಣಗಳು ಇದ್ದು ಶಿವಮೊಗ್ಗ-ಭದ್ರಾವತಿ ಎರಡೂ ನಗರಗಳು ರೆಸೆಲ್ಯೂಷನ್ ಮಾಡಿ ಕಳುಹಿಸಿದರೆ ಆ ಪ್ರಪೋಸಲ್ಸ್‌ನ್ನು ತಾವು ಕನ್ಸಿಡರ್ ಮಾಡುತ್ತೀರಾ ?

ಶ್ರೀ ಬಿ. ಎಂ. ಪಾಟೀಲ್.—ಈಗಾಗಲೇ ಉತ್ತರ ಹೇಳಿದ್ದೇನೆ. ಸೂಕ್ತ ಸಮಯ ಬಂದಾಗ ಮುನಿಸಿಪಲ್ ಕೌನ್ಸಿಲ್ಸ್ ರೆಸಲ್ಯೂಷನ್ ಮಾಡಿ ಕಳುಹಿಸಿದಾಗ ಸರ್ಕಾರ ಪರಿಶೀಲಿಸುತ್ತದೆ.

Kidnapping of a Member of Municipal Council, Davangere

846. **Sri VATAL NAGARAJ** (Chickpet).—

Will the Chief Minister be pleased to state :—

(*a*) whether it is a fact that at the time of President's Election to Davanagere City Municipality Sri Venugopal, Sub-Inspector of Davangere kidnapped Sri Venkatesh, a member of the Municipal Council ;

(*b*) whether Sri Venkatesh has informed them about this ;

(*c*) the action they have taken ?

Sri VEERENDRA PATIL (Chief Minister).—

(*a*) No.

(*b*) Yes.